ದೂರವಾಣಿ ಸಂಖ್ಯೆ: 080-22211707
ಫ್ಯಾಕ್ಸ್ ಸಂಖ್ಯೆ: 080-22121982
ಇಮೇಲ್: cafkptcl@gmail.com
ಜಾಲತಾಣ: www.kptcl.karnataka.gov.in

ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ,ಬೆಂಗಳೂರು – 560009

ಸಂಖ್ಯೆ:ಕವಿಪ್ರನಿನಿ/ಕೆಸಿಓ–32/40940/2022-23 | 1736 ದಿನಾಂಕ: 27 JUL 2022

## ಅಧಿಕೃತ ಜ್ಞಾಪನಾ

**ವಿಷಯ:** ಆರ್ಥಿಕ ವರ್ಷ 2022–23ನೇ ಸಾಲಿನ ಕಂದಾಯ ಆಯವ್ಯಯವನ್ನು ಹಂಚಿಕೆ ಮಾಡುವ ಕುರಿತು.

**ಉಲ್ಲೇಖ:** ದಿನಾಂಕ: 15.07.2022 ರಂದು ನಡೆದ ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯ ನಿರ್ಣಯ ಸಂಖ್ಯೆ: ಕವಿಪ್ರನಿನಿ/ಬಿ37/4437/2001-02/378.

*****

1. ಕವಿಪ್ರನಿನಿ ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯ ಉಲ್ಲೇಖಿತ ನಿರ್ಣಯದಲ್ಲಿ ಅನುಮೋದಿಸಿರುವಂತೆ, ಆರ್ಥಿಕ ವರ್ಷ 2022–23ನೇ ಸಾಲಿನ ಕಂದಾಯ ಆಯವ್ಯಯವನ್ನು ವಲಯವಾರು, ಲೆಕ್ಕ ಘಟಕ/ಲೆಕ್ಕ ಶೀರ್ಷಿಕೆವಾರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹಂಚಿಕೆ ಮಾಡಲಾಗಿದೆ:–

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ವಿವರಗಳು | ಲೆಕ್ಕ ಗುಂಪು | | | | ಒಟ್ಟು |
|---|---|---|---|---|---|---|
| | | 74 | 75 | 76 | 78 | |
| 1. | ಬೆಂಗಳೂರು | 91.99 | 270.75 | 21.20 | 0.00 | **383.94** |
| 2. | ತುಮಕೂರು | 53.35 | 173.55 | 15.95 | 0.00 | **242.85** |
| 3. | ಮೈಸೂರು | 35.25 | 120.69 | 6.93 | 0.00 | **162.87** |
| 4. | ಹಾಸನ | 43.76 | 200.03 | 12.50 | 0.00 | **256.29** |
| 5. | ಬಾಗಲಕೋಟೆ | 80.36 | 238.55 | 15.17 | 0.00 | **334.08** |
| 6. | ಕಲಬುರಗಿ | 42.04 | 167.02 | 11.94 | 0.00 | **221.00** |
| 7. | ಆಡಳಿತ ಕಛೇರಿ | 3.25 | 151.84 | 56.31 | 781.97 | **993.37** |
| 8. | ನಿವೃತ್ತಿ ಸೌಲಭ್ಯಗಳು | 0.00 | 350.00 | 0.00 | 0.00 | **350.00** |
| | **ಒಟ್ಟು** | **350.0** | **1672.42** | **140.00** | **781.97** | **2944.39** |

i) ಈಗಾಗಲೇ ಆರ್ಥಿಕ ವರ್ಷ 2022–23ನೇ ಸಾಲಿಗೆ ಹಂಚಿಕೆ ಮಾಡಿರುವ ಮೊದಲನೇ ಮತ್ತು ಎರಡನೇ ತ್ರೈಮಾಸಿಕದ ಮಧ್ಯಂತರ ಕಂದಾಯ ಆಯವ್ಯಯವನ್ನು ನಿಯತವಾಗಿ ಹಂಚಿಕೆ ಮಾಡಲಾದ ಕಂದಾಯ ಆಯವ್ಯಯಕ್ಕೆ ಖರ್ಚು ನಮೂದಿಸಿ ಸಕ್ರಮಗೊಳಿಸುವುದು ಹಾಗೂ ಮುಂಬರುವ ಕಂದಾಯ ವೆಚ್ಚಗಳ ಹುಂಡಿಗಳನ್ನು ನಿಯತವಾಗಿ ಬಳಸುವ ಕ್ರಮ ಕೈಗೊಳ್ಳುವುದು.

ii) ಲೆಕ್ಕ ಶೀರ್ಷಿಕೆ 77.5 ರಡಿ ಪ್ರತಿ ಪ್ರಸರಣ ವಲಯಕ್ಕೆ ರೂ.50,00,000/- ಗಳನ್ನು ಮೀಸಲು ಕಂದಾಯ ಆಯವ್ಯಯದಿಂದ ಡಿಕಮೀಷನಿಂಗ್ ವೆಚ್ಚ ಮತ್ತು ಆಸ್ತಿಗಳನ್ನು ತೊಡೆದುಹಾಕುವ ಕೆಲಸಗಳಿಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗಿದ್ದು, ಸದರಿ ಮೊತ್ತದಲ್ಲಿ ಪ್ರಸರಣ ವಲಯ ವ್ಯಾಪ್ತಿಗೆ ಬರುವ ಲೆಕ್ಕ ಘಟಕಗಳಿಗೆ ಸಂಬಂಧಪಟ್ಟ ವಲಯ ಕಛೇರಿಯಿಂದಲೇ ಅಗತ್ಯತೆಯ ಆಧಾರದ ಮೇಲೆ ಹಂಚಿಕೆ ಮಾಡುವಂತೆ ಸೂಚಿಸಲಾಗಿದೆ.

2. **ಕಂದಾಯ ಆಯವ್ಯಯವನ್ನು ಉಪಯೋಗಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿದೆ:–**

i) ಎಲ್ಲಾ ಲೆಕ್ಕ ಘಟಕಗಳು ಆರ್ಥಿಕ ವರ್ಷ 2022–23ನೇ ಸಾಲಿನ ಕಂದಾಯ ವೆಚ್ಚವನ್ನು ನಿಯತವಾಗಿ ಹಂಚಿಕೆ ಮಾಡಲಾದ ಕಂದಾಯ ಆಯವ್ಯಯಕ್ಕೆ ಮಿತಿಗೊಳಿಸುವುದು.

ii) ಎಲ್ಲಾ ಲೆಕ್ಕ ಘಟಕಗಳು ಕಂದಾಯ ವೆಚ್ಚಗಳ ಹುಂಡಿಗಳನ್ನು ಪಾವತಿಸುವ ಮುನ್ನ, ದುರಸ್ತಿ ಮತ್ತು ನಿರ್ವಹಣೆಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಂದಾಯ ಆಯವ್ಯಯದ ಲಭ್ಯತೆ ಕುರಿತು ಖಚಿತಪಡಿಸಿಕೊಳ್ಳುವುದು.

iii) ಎಲ್ಲಾ ಲೆಕ್ಕ ಘಟಕಗಳು, ಆರ್ಥಿಕ ವರ್ಷ 2022-23ನೇ ಸಾಲಿಗೆ ಲೆಕ್ಕ ಶೀರ್ಷಿಕೆವಾರು ಕಂದಾಯ ವೆಚ್ಚದ ವಿವರಗಳನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಆನ್‌ಲೈನ್ ಸಾಫ್ಟ್‌ವೇರ್‌ನಲ್ಲಿ ನಮೂದಿಸುವುದರೊಂದಿಗೆ ಮಾಸಿಕ ತಾಳೆಪಟ್ಟಿಯೊಂದಿಗೆ ತಾಳೆಯಾಗಿರುವುದರ ಬಗ್ಗೆ ಖಚಿತಪಡಿಸಿಕೊಳ್ಳುವುದು.

iv) ಎಲ್ಲಾ ಲೆಕ್ಕ ಘಟಕಗಳು ಪ್ರಸ್ತುತ ವರ್ಷದಲ್ಲಿ, ಹಿಂದಿನ ವರ್ಷದ (OSL) ಕಂದಾಯ ವೆಚ್ಚದ ಹುಂಡಿಗಳನ್ನು ಪಾವತಿಸುವ ಮುನ್ನ, ಪ್ರಸ್ತುತ ವರ್ಷದಲ್ಲಿನ ಕಂದಾಯ ಆಯವ್ಯಯದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಈ ರೀತಿಯ ಕಂದಾಯ ವೆಚ್ಚಗಳನ್ನು ಆರ್ಥಿಕ ವರ್ಷ 2022-23ನೇ ಸಾಲಿನ ನಿಯತ ಕಂದಾಯ ಆಯವ್ಯಯದಲ್ಲಿ ಭರಿಸುವುದು ಹಾಗೂ ಆರ್ಥಿಕ ವರ್ಷ 2022-23ನೇ ಸಾಲಿನ ಅಂತ್ಯಕ್ಕೆ ಹಿಂದಿನ ವರ್ಷದ (OSL) ಕಂದಾಯ ವೆಚ್ಚಗಳನ್ನು ಪ್ರಸ್ತುತ ವರ್ಷದಲ್ಲಿ ಕಂದಾಯ ಆಯವ್ಯಯದ ಕೋರಿಕೆಯನ್ನು ಸಲ್ಲಿಸುವಂತಿಲ್ಲ.

v) ಲೆಕ್ಕ ಗುಂಪು 74 ರಡಿ (ದುರಸ್ತಿ ಮತ್ತು ನಿರ್ವಹಣೆ), ಆರ್ಥಿಕ ವರ್ಷ 2021-22 ಮತ್ತು ಹಿಂದಿನ ವರ್ಷಗಳಲ್ಲಿ ಕಾಮಗಾರಿ ಆದೇಶವಾಗಿದ್ದು, ಕಾಮಗಾರಿ ಪೂರ್ಣಗೊಳ್ಳದೆ ಅಪೂರ್ಣವಾಗಿದ್ದು, ಇಂತಹ ಕಾಮಗಾರಿಗಳನ್ನು ಆರ್ಥಿಕ ವರ್ಷ 2022-23ನೇ ಸಾಲಿನಲ್ಲಿ ಆದ್ಯತೆಯ ಮೇರೆಗೆ ಕೈಗೊಂಡು ಮುಕ್ತಾಯಗೊಳಿಸುವುದು.

vi) ಕಾಮಗಾರಿಗಳನ್ನು ವರ್ಗೀಕರಿಸಲು ಈ ಕಛೇರಿ ಸುತ್ತೋಲೆ ಸಂಖ್ಯೆ: ಆಸ(ಲೆ ಮತ್ತು ಸಂ)/ಕೆಸಿಓ-30/ 60775/216-17 ದಿನಾಂಕ:10.03.2017 ಮತ್ತು ಆಸ(ಲೆ ಮತ್ತು ಸಂ)/ಕೆಸಿಓ-32/60851-57/2016-17 ದಿನಾಂಕ: 26.03.2018 ರಲ್ಲಿ ತಿಳಿಸಿರುವಂತೆ, ಬಂಡವಾಳ ಅಥವಾ ಕಂದಾಯ ವೆಚ್ಚ ಕಾಮಗಾರಿಗಳನ್ನು ಸಮರ್ಪಕವಾಗಿ ವರ್ಗೀಕರಿಸುವಂತೆ ಸೂಚಿಸಲಾಗಿದೆ. ಈ ರೀತಿಯಲ್ಲಿ ವರ್ಗೀಕರಿಸುವಾಗ ತಪ್ಪಾದಲ್ಲಿ ಅನಗತ್ಯವಾಗಿ ಲೆಕ್ಕ ಪರಿಶೋಧಕರರು/ಶಾಸನಬದ್ಧ ಲೆಕ್ಕ ಪರಿಶೋಧಕರ ಆಕ್ಷೇಪಣೆಗೆ ಒಳಗಾಗುತ್ತವೆ ಮತ್ತು ವ್ಯತಿರಿಕ್ತ ಆರ್ಥಿಕ ಪರಿಣಾಮಗಳಾಗುತ್ತವೆ, ಆದ್ದರಿಂದ ಈ ರೀತಿಯ ಆಕ್ಷೇಪಣೆಗೆ ಅವಕಾಶಕೊಡದೆ ಲೆಕ್ಕ ಘಟಕಗಳ ಹಂತದಲ್ಲಿಯೇ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

vii) ಒಂದೇ ಲೆಕ್ಕ ಗುಂಪಿನಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದ್ದಲ್ಲಿ, ಲೆಕ್ಕ ಘಟಕಗಳು ಪ್ರಸ್ತಾವನೆಯನ್ನು ಸಂಬಂಧಪಟ್ಟ ಪ್ರಸರಣ ವಲಯಕ್ಕೆ ಸಲ್ಲಿಸುವುದು. ವಲಯದ ಮುಖ್ಯ ಇಂಜಿನಿಯರ್(ವಿ) / ಲೆಕ್ಕ ನಿಯಂತ್ರಣಾಧಿಕಾರಿ ರವರುಗಳು ಪ್ರಸ್ತಾವನೆಯನ್ನು ಪರಿಶೀಲಿಸಿ ತಮ್ಮ ಹಂತದಲ್ಲಿಯೇ ಮರು ಹಂಚಿಕೆ ಮಾಡಿಕೊಳ್ಳಬಹುದಾಗಿದೆ. ಮರು ಹಂಚಿಕೆ ಮಾಡಿಕೊಂಡಿರುವ ಆದೇಶದ ಒಂದು ಪ್ರತಿಯನ್ನು ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ ಇವರಿಗೆ ಸಲ್ಲಿಸುವುದು.

viii) ಹೆಚ್ಚುವರಿ ಕಂದಾಯ ಆಯವ್ಯಯದ ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಅದೇ ಲೆಕ್ಕ ಗುಂಪಿನಲ್ಲಿರುವ ಇತರೆ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಕಂದಾಯ ಆಯವ್ಯಯವನ್ನು ಪರಿಶೀಲಿಸಿ ವಲಯ ಮಟ್ಟದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಸೂಚಿಸಲಾಗಿದೆ.

ix) ಒಂದು ಲೆಕ್ಕ ಗುಂಪಿನಿಂದ ಮತ್ತೊಂದು ಲೆಕ್ಕ ಗುಂಪಿಗೆ ಮರು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಹೆಚ್ಚುವರಿ ಕಂದಾಯ ಆಯವ್ಯಯದ ಪ್ರಸ್ತಾವನೆಯನ್ನು ಆಂತರಿಕ ಪರಿಶೋಧನೆಗೊಳಪಡಿಸಿ, ಪ್ರಸರಣ ವಲಯದ ಮುಖ್ಯ ಇಂಜಿನಿಯರ್(ವಿ) ಅಥವಾ ನಿಯಂತ್ರಣಾಧಿಕಾರಿ ರವರ ಶಿಫಾರಸ್ಸಿನೊಂದಿಗೆ ಈ ಕಛೇರಿಗೆ ಕಳುಹಿಸತಕ್ಕದ್ದು.

x) ಹೆಚ್ಚುವರಿ ಕಂದಾಯ ಆಯವ್ಯಯದ ಅಗತ್ಯತೆ ಇದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ, ಈ ಕಛೇರಿ ಪತ್ರ ಸಂಖ್ಯೆ: ಆಸ(ಲೆ ಮತ್ತು ಸಂ)/ಕೆಸಿಓ-32/60851-57/2016-17 ದಿನಾಂಕ: 25.10.2017 ಮತ್ತು ಸುತ್ತೋಲೆ ಸಂಖ್ಯೆ: ಆಸ(ಲೆ ಮತ್ತು ಸಂ)/ಕೆಸಿಓ-32/6366/2019-20 ದಿನಾಂಕ: 07.09.2019ರಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು.

xi) ಲೆಕ್ಕ ಗುಂಪು 74.2 (ದುರಸ್ತಿ ಮತ್ತು ನಿರ್ವಹಣೆ-ಕಟ್ಟಡಗಳು) ಮತ್ತು 74.3 (ದುರಸ್ತಿ ಮತ್ತು ನಿರ್ವಹಣೆ-ಸಿವಿಲ್ ಕಾಮಗಾರಿಗಳು) ರಡಿ ಯಾವುದೇ ರೀತಿಯಾದ ಮರು ಹೊಂದಾಣಿಕೆ ಮಾಡುವಂತಿಲ್ಲ.

xii) ದಿನಾಂಕ: 01.04.2022 ರಿಂದ ಲೆಕ್ಕ ಘಟಕಗಳು ಕೋರಿರುವಂತೆ ಹಂಚಿಕೆ/ಮರು ಹಂಚಿಕೆ ಮಾಡಲಾದ ಕಂದಾಯ ಆಯವ್ಯಯವನ್ನು ಪ್ರಸ್ತುತ ಆರ್ಥಿಕ ವರ್ಷ 2022-23ರ ಕಂದಾಯ ಆಯವ್ಯಯದಲ್ಲಿ ಭರಿಸುವುದು.

xiii) ವಲಯ/ವೃತ್ತದ ನಿಯಂತ್ರಣಾಧಿಕಾರಿ/ಉಪಲೆಕ್ಕ ನಿಯಂತ್ರಣಾಧಿಕಾರಿ ರವರುಗಳು ತಮ್ಮ ಕಾರ್ಯವ್ಯಾಪ್ತಿಯ ಲೆಕ್ಕ ಘಟಕಗಳ ಮಾಹೆವಾರು ಕಂದಾಯ ವೆಚ್ಚಗಳನ್ನು ಹಂಚಿಕೆ ಮಾಡಲಾದ ಕಂದಾಯ ಆಯವ್ಯಯದೊಂದಿಗೆ ಪರಿಶೀಲಿಸಿ ಮತ್ತು ಈ ಆದೇಶದಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

"ಆದೇಶದ ಮೇರೆಗೆ"

ಆರ್ಥಿಕ ಸಲಹೆಗಾರರು(ಲೆ ಮತ್ತು ಸಂ)
ಕವಿಪ್ರನಿನಿ

<u>ಪ್ರತಿಗಳು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

1. ಆರ್ಥಿಕ ಸಲಹೆಗಾರರು(ಆಂ.ಪ)/ (ಟಿ ಮತ್ತು ಪಿ)/ (ನಿ.ವ್ಯ)/ (ಎಸ್.ಎಲ್.ಡಿ.ಸಿ), ಕವಿಪ್ರನಿನಿ, ಬೆಂಗಳೂರು.
2. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ/ (ಟಿ ಮತ್ತು ಪಿ)/ (ಎಸ್.ಎಲ್.ಡಿ.ಸಿ),(ಆರ್.ಟಿ ಮತ್ತು ಆರ್&ಡಿ),(ಪಿ ಮತ್ತು ಸಿ) ಕವಿಪ್ರನಿನಿ.
3. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, (ಲೆ, ಪಿಂ ಮತ್ತು ಮುಂ)/ (ಕಾ ಮತ್ತು ತೆ)/ (ಹಣಕಾಸು)/ (ಟಿ.ಟಿ.ಸಿ), ಕವಿಪ್ರನಿನಿ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ (ಕಾಮಗಾರಿ)/ ಉಪ ಲೆಕ್ಕ ನಿಯಂತ್ರಣಾಧಿಕಾರಿ, (ಆರ್.ಟಿ ವೃತ್ತ), ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್(ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಕವಿಪ್ರನಿನಿಯ ಅಂತರ್ಜಾಲದಲ್ಲಿ ಪ್ರಕಟಿಸಲು.
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ರವರಿಗೆ ರವಾನಿಸುತ್ತಾ, ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ರವರ ಆದ್ಯ ಗಮನಕ್ಕೆ ತರಲು ಕೋರಿದೆ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ (ಕಾಮಗಾರಿ)/ ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಬೃಹತ್ ಕಾಮಗಾರಿ ವಿಭಾಗ/ ಪ್ರಸರಣ ಮಾರ್ಗಗಳು ಮತ್ತು ವಿದ್ಯುತ್ ಉಪ ಕೇಂದ್ರಗಳ ವಿಭಾಗ/ ಇ.ಹೆಚ್.ವಿ ಕೇಬಲ್ ವಿಭಾಗ, ಕವಿಪ್ರನಿನಿ.
8. ವ್ಯವಸ್ಥಾಪಕರು (ನಗದು ಮತ್ತು ಲೆಕ್ಕಗಳು)/ (ಆಂ.ನಿ), ನಿಗಮ ಕಾರ್ಯಲಯ, ಕವಿಪ್ರನಿನಿ, ಬೆಂಗಳೂರು.